INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
PageNo,93-103
Peer Reviewed Journal, Referred Journal

# ಬೈಲಕುಪ್ಪೆ ಟಿಬೇಟಿಯನ್ನರ ಸಂಪ್ರದಾಯ ಮತ್ತು ಆಚರಣೆಗಳು

ಹರೀಶ ಎಸ್.[1]

ಟಿಬೇಟಿಯನ್ನರು ಭಾರತಕ್ಕೆ ಬಂದು ಅರ್ಧ ಶತಮಾನಗಳೇ ಕಳೆದುಹೋಗಿವೆ. ನಮ್ಮ ಭಾರತವು ಹಲವಾರು ವಿಶಿಷ್ಟತೆಯನ್ನು, ವೈಭವವನ್ನು, ಏಕತೆಯನ್ನು ಮೆರೆದಿರುವ ರಾಷ್ಟ್ರ ಭಾರತದ ಮಡಿಲಿನಲ್ಲಿ ಹಲವಾರು ಜನಾಂಗಗಳು ಆಶ್ರಯ ಪಡೆದಿವೆ. ಅವರಲ್ಲಿ ಈ ಟಿಬೇಟಿಯನ್ನರು ಚೀನಾದ ಆಕ್ರಮಣದಿಂದ ಅನೇಕ ಸಮಸ್ಯೆಗಳನ್ನು ಅನುಭವಿಸಿದರು. ಟಿಬೇಟ್‌ನಿಂದ ಇವರನ್ನು ಹೊರ ಹಾಕಲಾಯಿತು. ಚೀನಿಯರ ದಾಳಿಯಿಂದ ತಪ್ಪಿಸಿಕೊಂಡು ಟಿಬೇಟ್‌ನಿಂದ ಓಡಿ ಬಂದ ಇವರು ನಿರಾಶ್ರಿತರಾದರು. ಆಗ ಇವರಿಗೆ ಆಶ್ರಯ ನೀಡಿದ್ದು ಭಾರತ ದೇಶವಾಗಿದೆ.

ಈ ಟಿಬೇಟಿಯನ್ನರಿಗೆ ಭಾರತದ ಹಲವಾರು ರಾಜ್ಯಗಳಲ್ಲಿ ಆಶ್ರಯ ನೀಡಲಾಗಿದೆ. ಅವುಗಳಲ್ಲಿ ಕರ್ನಾಟಕ ರಾಜ್ಯವು ಒಂದಾಗಿದೆ. ಕರ್ನಾಟಕದಲ್ಲಿ ಆಶ್ರಯ ನೀಡಲಾಗಿರುವ ಪ್ರದೇಶಗಳಲ್ಲಿ ಬೈಲಕುಪ್ಪೆ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ. ಈ ಬೈಲಕುಪ್ಪೆಯು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಿಂದ ಸುಮಾರು 15 ಕಿ.ಮೀ. ಅಂತರದಲ್ಲಿದೆ. ಬೈಲಕುಪ್ಪೆ ಟಿಬೇಟಿಯನ್ನರ ಜೀವನ ಪ್ರಾರಂಭದಲ್ಲಿ ಸುಖಮಯವಾಗಿರಲಿಲ್ಲ. ದೈನಂದಿನ ಬದುಕಿನಲ್ಲಿ ಹಲವಾರು ದೌರ್ಜನ್ಯಗಳು, ಅಪಮಾನಗಳನ್ನು ಸ್ಥಳೀಯರಿಂದಲೇ ಅನೇಕ ಸಮಸ್ಯೆಗಳನ್ನು ಅನುಭವಿಸಿದರು. ಆ ನಂತರ ತಮ್ಮದೇ ಆದಂತಹ ಕಟ್ಟುಪಾಡುಗಳನ್ನು ಹಾಕಿಕೊಂಡು ಉತ್ತಮ ಸಮಾಜವನ್ನು ಮುನ್ನಡೆಸುತ್ತಿರುವರು.

ಭಾರತದ ಅಂದಿನ ಪ್ರಧಾನ ಮಂತ್ರಿಯಾಗಿದ್ದಂತಹ ಜವಾಹರ್‌ಲಾಲ್ ನೆಹರು ಅವರು 1959 ರಲ್ಲಿ ಭಾರತಕ್ಕೆ ಆಶ್ರಯ ಕೋರಿ ಬಂದ ನಿರಾಶ್ರಿತ ಟಿಬೇಟಿಯನ್ನರಿಗೆ ಸಹಕಾರ ಮನೋಭಾವನೆಯಿಂದ ಆಶ್ರಯ ನೀಡಿದರು. ಹಾಗೆಯೇ ಕರ್ನಾಟಕಕ್ಕೆ ಒಂದು ನಿರಾಶ್ರಿತ ಟಿಬೇಟಿಯನ್ ತಂಡವನ್ನು ಕಳುಹಿಸಲಾಯಿತು. ಆ ಸಂದರ್ಭದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ರಾಜ್ಯದ ನಾಲ್ಕು ಪ್ರದೇಶಗಳಲ್ಲಿ ಅವರಿಗೆ ಪುನರ್ವಸತಿಯನ್ನು ಕಲ್ಪಿಸಲಾಯಿತು. ಆ ಪ್ರದೇಶಗಳಾವುವೆಂದರೆ, ಪಿರಿಯಾಪಟ್ಟಣ ತಾಲ್ಲೂಕಿನ ಬೈಲಕುಪ್ಪೆ, ಹುಣಸೂರು ತಾಲ್ಲೂಕಿನ ಗುರುಪುರ, ಕೊಳ್ಳೇಗಾಲದ ಒಡೆಯರಪಾಳ್ಯ ಮತ್ತು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು

[1]. ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

ಇವುಗಳಲ್ಲೆಲ್ಲಾ ಅತೀ ವಿಸ್ತಾರವಾದ ಭೂ ಪ್ರದೇಶವೆಂದರೆ ಬೈಲಕುಪ್ಪೆ ಇಲ್ಲಿ ಟಿಬೇಟಿಯನ್ನರು 1961–62 ರಲ್ಲಿ ಬಂದು ನೆಲೆಸಿದರು. ಅಂದಿನಿಂದ ಅಲ್ಲಿ ಟಿಬೇಟಿಯನ್ನರು ತಮ್ಮ ಭಾಷೆ, ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಸ್ಥಳೀಯರೊಂದಿಗೆ ಸೌಹಾರ್ದತೆಯಿಂದ ಶಾಂತಿಯುತವಾಗಿ ಜೀವನ ನಡೆಸುತ್ತಿದ್ದಾರೆ.

ಭಾರತದಲ್ಲಿರುವ ಟಿಬೇಟಿಯನ್ ಕ್ಯಾಂಪ್‌ಗಳಲ್ಲಿ ಬೈಲುಕುಪ್ಪೆಯು ಬಹಳ ಪ್ರಶಸ್ತವಾದುದ್ದು ಎಂದು ಅವರ ಧರ್ಮ ಗುರುಗಳಾದ ದಲೈಲಾಮ ಅವರೇ ಮೆಚ್ಚಿರುತ್ತಾರೆ. ಈ ಪ್ರದೇಶದಲ್ಲಿ ಸುಮಾರು 24 ಶಿಬಿರಗಳಿದ್ದು, ಅವುಗಳಲ್ಲಿ ಕೈಲಾಸಪುರವು ಪ್ರಖ್ಯಾತವಾಗಿದೆ. ವೈಭವೋಪೇತವಾದ ಸುವರ್ಣ ಬುದ್ಧನ ಪ್ರತಿಮೆಯನ್ನೊಳಗೊಂಡ ಬೌದ್ಧ ದೇವಾಲಯ ಹಾಗೂ ಬೌದ್ಧ ಸನ್ಯಾಸಿ ಲಾಮಗಳ ವಸತಿ ಸಮುಚ್ಚಯಗಳೂ ಇಲ್ಲಿವೆ.

ಬೌದ್ಧ ಧರ್ಮದ ಹಿನ್ನೆಯಲ್ಲಿ ಟಿಬೇಟಿಯನ್ನರು ತಮ್ಮನ್ನು ಹೆಚ್ಚಾಗಿ ಗುರುತಿಸಿಕೊಳ್ಳುತ್ತಾರೆ. ಬೌದ್ಧ ಧರ್ಮವು ಟಿಬೇಟಿಯನ್ನರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಈ ಟಿಬೇಟಿಯನ್ನರು ಬೌದ್ಧ ಧರ್ಮದ ಮಹಾಮಾನ ಪಂಥದವರಾಗಿದ್ದು ಈ ಧರ್ಮವನ್ನು ತಮ್ಮ ರಾಷ್ಟ್ರ ಧರ್ಮವನ್ನಾಗಿ ಮಾಡಿಕೊಂಡಿದ್ದಾರೆ. ಟಿಬೇಟಿಯನ್ನರಿಗೆ ಬೌದ್ಧ ವಿಹಾರಗಳಲ್ಲಿ ಬುದ್ಧನ ತತ್ವಗಳನ್ನು ಆಚಾರ್ಯರು, ವಿದ್ವಾಂಸರು, ಧರ್ಮ ಗುರುಗಳು ಬೋಧಿಸುತ್ತಾರೆ. ಲಾಮಗಳು ಸನ್ಯಾಸತ್ವವನ್ನು ಸ್ವೀಕರಿಸಿ ಬುದ್ಧನ ತತ್ವಗಳನ್ನು ಅಭ್ಯಸಿಸುತ್ತಾರೆ. ಬೈಲಕುಪ್ಪೆಯಲ್ಲಿ ಟಿಬೇಟಿಯನ್ನರು ಬೌದ್ಧ ಧರ್ಮದ ಅಭಿವೃದ್ಧಿಗೆ ನಿರಂತರ ಸೇವೆಯನ್ನು ಮಾಡಲು ತಮ್ಮನ್ನು ಮುಡಿಪಾಗಿಸಿಕೊಂಡಿದ್ದಾರೆ. ನೊಬೆಲ್ ಪ್ರಶಸ್ತಿ ವಿಜೇತ 14ನೇ ದಲೈಲಾಮ ಟಿಬೇಟಿಯನ್ನರ ಧಾರ್ಮಿಕ ಗುರುವಾಗಿದ್ದು ತಮ್ಮ ಜನರಿಗೆ ಮೂಲಭೂತ ಸೌಕರ್ಯಗಳನ್ನು ದೊರಕಿಸಿಕೊಡಲು ಮತ್ತು ಧರ್ಮಕ್ಕೆ ಅಸ್ತಿತ್ವವನ್ನು ಕಲ್ಪಸಲು ನಿರಂತರವಾಗಿ ಶ್ರಮಿಸಿರುತ್ತಾರೆ.

ಬೈಲುಕುಪ್ಪೆ ಟಿಬೇಟಿಯನ್ ಸಂಸ್ಕೃತಿಯು ವಿಶೇಷವಾದುದ್ದಾಗಿದೆ. ಸಂಪ್ರದಾಯ ಮತ್ತು ಆಚರಣೆಗಳು ಕೆಲವು ಉತ್ತಮವಾಗಿವೆ. ಮತ್ತೆ ಕೆಲವು ಆಚರಣೆಗಳು ದೈಹಿಕವಾಗಿ ಶಿಕ್ಷೆಗೆ ಒಳಪಡಿಸುವಂತಾವುಗಳಾಗಿವೆ. ಬೇರೆ ಸಂಸ್ಕೃತಿಯ ಪ್ರಭಾವವು ಈ ಆಚರಣೆಗಳ ಮೇಲೆ ಪ್ರಭಾವ ಬೀರಿವೆ. ಇವರು ಮಂತ್ರ–ತಂತ್ರಗಳನ್ನು ಕಲಿತು ಆಚರಣೆಗೆ ತಂದಿದ್ದಾರೆ. ಹಾಗೆಯೇ ಪ್ರತಿಯೊಂದು ಸಂಪ್ರದಾಯವು ಒಂದೊಂದು ವಿಶೇಷತೆಯನ್ನು ಒಳಗೊಂಡಿರುವುದನ್ನು ನೋಡಬಹುದಾಗಿದೆ.

**ಬಾನ್ ಸಂಪ್ರದಾಯ :**

ಟಿಬೇಟಿಯನ್ನರು ಬೌದ್ಧ ಸಂಪ್ರದಾಯದ ಜೊತೆಗೆ ಬಾನ್ ಸಂಪ್ರದಾಯವನ್ನು ಕೆಲವರು ಆಚರಿಸುತ್ತಾರೆ. ಬೆರಾನ್ಫೊ ಪ್ರಕಾರ ಈ ಸಂಪ್ರದಾಯವು ಪ್ರಾರಂಭದಲ್ಲಿ 18 ಜನ ಜ್ಞಾನವಂತ ಸಂತರಿಂದ ಸ್ಥಾಪನೆಯಾಗಿದ್ದು. ಲಾರ್ಡ್‌ಸೆನ್‌ರಾಜ್ ಎಂಬ ದೊರೆಯು ಇದರ ಸ್ಥಾಪಕನೆಂದು ಹೇಳಲಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಬಂದ ವ್ಯಾಪಾರಿಗಳು ಬಾನ್ ಧರ್ಮವನ್ನು ಟಿಬೇಟಿಗೆ ತಂದವರು ಎಂಬ ಮಾತು ಕೂಡಾ ಇದೆ. ಪೂರ್ವದಲ್ಲಿ ಟೆಂಪಾಶೆರಾಬ್ ಎಂಬುವವನು ಸ್ವರ್ಗದಲ್ಲಿ ಈ ಸಂಪ್ರದಾಯವನ್ನು ಕುರಿತು ಭೂಲೋಕದ ಕೈಲಾಸ ಪರ್ವತದ ತಪ್ಪಲಿನಲ್ಲಿ ಬಂದು ಜನತೆಗೆ ಕರುಣೆಯ ಬಗ್ಗೆ ಬೋಧಿಸಲು ಹಾಗೂ ದುಃಖಿತ ವ್ಯಕ್ತಿಗಳಿಗೆ ಶಾಂತಿ ಸಂದೇಶ ಸಾರಲು ಬಂದು ಬಾನ್ ಸಂಪ್ರದಾಯ ಸ್ಥಾಪಿಸಿದನೆಂಬ ನಂಬಿಕೆ ಇದೆ. ಇವರ ಬಗ್ಗೆ ಕ್ರಿ.ಶ. 10 ರಿಂದ 11ನೇ ಶತಮಾನದ ಹಲವಾರು ಪುರಾವೆಗಳು ದೊರೆಕಿದ್ದು ಬಿಳಿ ನೀರು ಮತ್ತು ಕಪ್ಪು ನೀರು ತತ್ವವನ್ನು ಪ್ರತಿಪಾದಿಸುವ ಸಂಪ್ರದಾಯ ಇದಾಗಿದೆ. ಕರುಣೆಯ ಬಗ್ಗೆ ಬೋಧಿಸಲು ಬರುವ ವ್ಯಕ್ತಿಗಳು ಪರಿಶುದ್ಧರಾಗಿ ಬಿಳಿಯ ವಸ್ತ್ರದೊಂದಿಗೆ ಸ್ನಾನವನ್ನು ಮಾಡಿ ಬರುತ್ತಾರಂತೆ ಇದಕ್ಕೆ ಬಿಳಿ ನೀರಿನ ತತ್ವ ಎಂದು ಕೆರಯುತ್ತಾರೆ.

ಈ ಧರ್ಮವು ಸುಮಾರು ಕ್ರಿ.ಶ. 755 ರಲ್ಲಿ ಸಂಪೂರ್ಣವಾಗಿ ನಶಿಸಿ ಹೋಗಿತ್ತು. 19ನೇ ಶತಮಾನದಲ್ಲಿ ಶೋರ್ಜಾ–ಟಶೀ–ಗ್ಯಾಟ್‌ಸನನ ಸುಮಾರು 18 ಅಧ್ಯಾಯಗಳ ಬರವಣಿಗೆಯನ್ನು ಸಂಗ್ರಹಿಸಿ ಬಾನ್ ಸಂಪ್ರದಾಯಕ್ಕೆ ಪುನಶ್ಚೇತನ ಕೊಡಲಾಯಿತು. ಇಷ್ಟಲ್ಲದೇ ಕಗ್ಯಾ ಜಿಗ್ನೆಸಿ ಎಂಬುವವರು ಟೆಸುಗ್ಯಾಸನ್‌ನನ ಅನುಯಾಯಿಗಳಾದರು ಆದರೆ ಚೀನಿಯರ ದಾಳಿಯಿಂದ ಬಾನ್ ಸಂಪ್ರದಾಯ ಮತ್ತೆ ನಾಶವಾಯಿತು. ಭಾರತ ಮತ್ತು ನೇಪಾಳದಲ್ಲಿ ಬಾನ್ ಪ್ರಚಾರ ಕೈಗೊಂಡು ನೇಪಾಳದಲ್ಲಿ ಅಂತರರಾಷ್ಟ್ರೀಯ ಬಾನ್ ಸಂಸ್ಥೆಯನ್ನು ಸ್ಥಾಪಿಸಿ 1988 ರಲ್ಲಿ ಸಾರಾನಾಥದಲ್ಲಿ ನಡೆದ ಒಂದು ಸಮ್ಮೇಳನದಲ್ಲಿ ಬಾನ್ ಸಂಪ್ರದಾಯವನ್ನು ಉಳಿಸುವಂತೆ ಒತ್ತಾಯ ತರಲಾಗಿದೆ. ಟಿಬೇಟಿಯನ್ನರ ಧರ್ಮ ಗುರುವಾದಂತಹ ದಲೈಲಾಮರವರ ಹುಟ್ಟು ಹಬ್ಬವೆಂಬುದಾಗಿ ಆಚರಣೆಯನ್ನು ಮಾಡುತ್ತಾರೆ.

## ದೀಕ್ಷಾ ಪದ್ಧತಿ :

ಟಿಬೇಟಿಯನ್ ಸಂಪ್ರದಾಯದಲ್ಲಿ ದೀಕ್ಷಾ ಪದ್ಧತಿಯು ಹಲವಾರು ವಿಶೇಷತೆಯನ್ನು ಹೊಂದಿದೆ. ಈ ಕುಟುಂಬದಲ್ಲಿ ಒಂದು ಮಗುವನ್ನು ಬೌದ್ಧ ಭಿಕ್ಷುಗಳಾಗಿ ಮಾಡಬೇಕೆಂಬ ನಿಯಮವಿದೆ. ಹೆಣ್ಣು ಮಕ್ಕಳು ಐದು ವರ್ಷದವರಿದ್ದಾಗ ಅವರಿಗೆ ದೀಕ್ಷೆಯನ್ನು ಕೊಡಲಾಗುತ್ತದೆ. ಬೌದ್ಧ ಗುರುಗಳ ಸಮ್ಮುಖದಲ್ಲಿ ದೀಕ್ಷೆಯನ್ನು ಕೊಡಲಾಗುತ್ತದೆ. ಈ ಬೌದ್ಧ ಭಿಕ್ಷುಕಿಗಳು ಅವರಿಗೆ ನಿಗಧಿಪಡಿಸಿರುವ ವಿಹಾರಗಳಲ್ಲಿ ಉಳಿದುಕೊಳ್ಳುತ್ತಾರೆ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ವರ್ಷಕ್ಕೆ ಒಂದೆರಡು ಬಾರಿ ಕರೆದುಕೊಂಡು ಬರಬಹುದಾಗಿದೆ.

**ಪ್ರಾರ್ಥನಾ ಧ್ವಜಗಳು :**

ಟಿಬೇಟಿಯನ್ ಸಂಸ್ಕೃತಿಗಳಲ್ಲಿ ಈ ಪ್ರಾರ್ಥನಾ ಧ್ವಜಗಳಿಗೆ ಭಕ್ತಿಪೂರ್ವಕ ಸ್ಥಾನವನ್ನು ನೀಡಿದ್ದಾರೆ. ಈ ಪ್ರಾರ್ಥನಾ ಧ್ವಜದಲ್ಲಿ ಐದು ಬಣ್ಣಗಳಿರುವುದು ಕಂಡುಬರುತ್ತದೆ. ಬಿಳಿ, ಕೆಂಪು, ಹಸಿರು, ನೀಲಿ ಮತ್ತು ಹಳದಿ ಬಣ್ಣಗಳಿಂದ ಕೂಡಿರುತ್ತದೆ. ನೀಲಿ ಬಣ್ಣವು ಆಕಾಶವನ್ನು ಸೂಚಿಸುತ್ತದೆ. ಕೆಂಪು ಬಣ್ಣವು ಬೆಂಕಿಯನ್ನು ಸೂಚಿಸುತ್ತದೆ. ಹಸಿರು ಬಣ್ಣವು ನೀರನ್ನು ಸೂಚಿಸುತ್ತದೆ. ಹಳದಿ ಬಣ್ಣವು ಮಣ್ಣನ್ನು ಸೂಚಿಸುತ್ತದೆ. ಬಿಳಿಯು ಗಾಳಿಯನ್ನು ಸೂಚಿಸುತ್ತದೆ. ಇದು ಟಿಬೇಟಿಯನ್‌ರು ಪಂಚ ಭೂತಗಳನ್ನು ಪೂಜಿಸುವ ಸಂಪ್ರದಾಯವಾಗಿ ರೂಢಿಸಿಕೊಂಡಿದ್ದಾರೆ.

ಜನರಿಗೆ ಆರೋಗ್ಯ, ನೆಮ್ಮದಿ, ಸುಖ, ಶಾಂತಿ ದೊರಕಲಿ ಎಂಬುದರ ಉದ್ದೇಶದಿಂದ ಧ್ವಜಗಳ ಮೇಲೆ ತಮ್ಮ ಮಂತ್ರಗಳನ್ನು ರಚಿಸಿ ಅದರ ಮೇಲೆ ಬರವಣಿಗೆಯ ರೂಪದಲ್ಲಿ ಬರೆದು ಮರಗಳಲ್ಲಿ, ಬೆಟ್ಟಗಳಲ್ಲಿ, ಕಣಿವೆಗಳಲ್ಲಿ ಮನೆಗಳಲ್ಲಿ ಕಟ್ಟುತ್ತಾರೆ. ಇದರಿಂದ ದೆವ್ವ, ಭೂತಗಳ ಬಗ್ಗೆ ಹೆಚ್ಚು ನಂಬಿಕೆಯನ್ನು ಹೊಂದಿದ್ದು ಇವುಗಳಿಂದ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಈ ಧ್ವಜಗಳನ್ನು ಕಟ್ಟುತ್ತಾರೆ. ಧರ್ಮ ಪ್ರಚಾರದ ಉದ್ದೇಶವನ್ನು ಹೊಂದಿದ್ದಾರೆ.

**ಗುಂಫ :**

ಗುಂಫವು ಟಿಬೇಟಿಯನ್ ಸಂಸ್ಕೃತಿಯಲ್ಲಿ ಹೆಚ್ಚು ವಿಶೇಷವಾದದ್ದು ಗುಂಫದಲ್ಲಿ ಹಲವು ರೀತಿಯ ಕಾರ್ಯಗಳಲ್ಲಿ ಹೊಗೆಯನ್ನು ಹಾಕಲಾಗುತ್ತದೆ. ಗಂಧದ ಚಕ್ಕೆ, ಹಸಿ ಸೊಪ್ಪು, ತೇಗ, ನೀಲಗಿರಿ ಸೊಪ್ಪು ಮುಂತಾದ ಹಸಿ ಸೊಪ್ಪುಗಳನ್ನು ಬಳಸಿ ಹೊಗೆಯನ್ನು ಹಾಕಲಾಗುತ್ತದೆ. ಪೂಜೆಯ ಸಂದರ್ಭದಲ್ಲಿ ಇವರಲ್ಲಿ ಹೊಗೆಯನ್ನು ಹಾಕಲಾಗುತ್ತದೆ. ಕೆಲವರು ಪ್ರತಿ ನಿತ್ಯವೂ ಇವರಲ್ಲಿ ಹೊಗೆಯನ್ನು ಹಾಕುತ್ತಾರೆ. ಈ ಗುಂಫವು ಪ್ರತಿಯೊಬ್ಬರ ಮನೆಯಲ್ಲಿಯೂ ಇರುತ್ತವೆ. ಮನೆಯ ಮುಂದೆಯೇ ಈ ಗುಂಫವನ್ನು ಇಟ್ಟಿರುತ್ತಾರೆ.

**ಶವ ಸಂಸ್ಕಾರ ಪದ್ಧತಿ :**

ಟಿಬೇಟಿಯನ್ ಸಂಸ್ಕೃತಿಯಲ್ಲಿ ಶವಸಂಸ್ಕಾರ ಪದ್ಧತಿಯು ವಿಶೇಷವಾಗಿದೆ. ಇವರ ಶವ ಸಂಸ್ಕಾರ ಪದ್ಧತಿಯು ಒಂದು ಆಶ್ಚರ್ಯದಾಯಕ ವಿಷಯವಾಗಿ ಕಂಡುಬರುತ್ತದೆ. ಇವರು ಜ್ಯೋತಿಷ್ಯದಲ್ಲಿ ಹೆಚ್ಚು ನಂಬಿಕೆ ಹೊಂದಿದ್ದು ಜ್ಯೋತಿಷ್ಯದ ಪ್ರಕಾರವೇ ಶುಭದಿನದಂದು, ಶುಭ ಘಳಿಗೆಯಲ್ಲಿ ಶವ ಸಂಸ್ಕಾರವನ್ನು ಮಾಡಲಾಗುತ್ತದೆ. ಅಥವಾ ಆ ಘಳಿಗೆ ಬರುವವರೆಗೂ ಸಹ ಶವವನ್ನು ಒಂದು ಮನೆಯಲ್ಲಿ ಕೂರಿಸಿ

ಅದರ ಕತ್ತಿಗೆ ಕವೆ ಕಡ್ಡಿಯನ್ನು ಕೊಟ್ಟು ಕೂರಿಸುತ್ತಾರೆ. ಆ ಶವಕ್ಕೆ ಪ್ರತಿ ನಿತ್ಯ ಪೂಜೆಯನ್ನು ಸಲ್ಲಿಸುತ್ತಾರೆ. ಅಲ್ಲಿಗೆ ಬೇರೆ ಯಾವ ಟಿಬೇಟಿಯನ್ ಮಹಿಳೆಯರು ಹೋಗುವುದಿಲ್ಲ. ಪ್ರತಿ ನಿತ್ಯ ಲಾಮಗಳು ಹೋಗಿ ಪೂಜೆಯನ್ನು ಮಾಡುತ್ತಾರೆ. ಆ ಮನೆಗೆ ಹಾಗೂ ಶವಕ್ಕೆ ಸುಗಂಧ ದ್ರವ್ಯ ಹಾಕಲಾಗುತ್ತದೆ. ಶವ ಸಂಸ್ಕಾರಕ್ಕೂ ಮಹಿಳೆಯರು ಭಾಗವಹಿಸುವಂತಿಲ್ಲ. ಲಾಮಗಳ ಮುಖಂಡತ್ವದಲ್ಲಿ ಶವ ಸಂಸ್ಕಾರವನ್ನು ಮಾಡಲಾಗುತ್ತದೆ. ಇತ್ತೀಚೆಗೆ ಸುಡುವ ಪದ್ಧತಿಯು ಅಸ್ಥಿತ್ವದಲ್ಲಿರುವುದು ಕಂಡುಬರುತ್ತದೆ. ಈ ಮೊದಲು ಸತ್ತಂತಹ ಸಮಯದ ಪ್ರಕಾರ ಪ್ರಾಣಿ ಮತ್ತು ಪಕ್ಷಿಗಳಿಗೆ ಆಹಾರವಾಗಿ ಎಸೆಯುತ್ತಿದ್ದರು. ಇತ್ತೀಚೆಗೆ ಸುಡುವ ಮತ್ತು ಮಣ್ಣಿನಲ್ಲಿ ಹೂಳುವ ಪದ್ಧತಿಯು ಅಸ್ಥಿತ್ವದಲ್ಲಿದೆ.

## ಹಬ್ಬ–ಹರಿದಿನಗಳು :

ಟಿಬೇಟಿಯನ್ ಸಂಸ್ಕೃತಿಯಲ್ಲಿ ಕೆಲವೇ ಹಬ್ಬಗಳಿದ್ದರೂ ಸಹ ಆ ಹಬ್ಬಗಳನ್ನು ವಿಶೇಷವಾಗಿ ಅಚರಿಸುತ್ತಾರೆ. ಪ್ರತಿಯೊಂದು ಹಬ್ಬಗಳು ಟಿಬೇಟಿಯನ್ ಸಂಸ್ಕೃತಿಯನ್ನು ವೈವಿಧ್ಯಮಯವಾಗಿ ಬಿಂಬಿಸುತ್ತಾರೆ. ಬೈಲಕುಪ್ಪೆಯಲ್ಲಿಯೂ ಟಿಬೇಟಿಯನ್ನರು ತಮ್ಮ ಹಬ್ಬಗಳೆಲ್ಲವನ್ನೂ ವೈಭವದಿಂದ ಆಚರಿಸುತ್ತಾರೆ. ಅದರಲ್ಲಿಯೂ ಮಹಿಳೆಯರು ಹಬ್ಬಗಳಲ್ಲಿ ವಿಶೇಷವಾಗಿ ಭಾಗವಹಿಸುತ್ತಾರೆ. ಟಿಬೇಟಿಯನ್ ಮಹಿಳೆಯರು ಹಬ್ಬದ ದಿನದಂದು 'ಛುಪೆ' ಎಂಬ ಉಡುಪನ್ನು ಧರಿಸುತ್ತಾರೆ. ಹಬ್ಬವನ್ನು ಅವರ ಸಂಪ್ರದಾಯದಂತೆ ಆಚರಿಸಿ ಬೌದ್ಧ ವಿಹಾರಗಳಿಗೆ ಹೋಗಿ ಪೂಜೆಯನ್ನು ಮಾಡುತ್ತಾರೆ. ಪ್ರತೀ ತಿಂಗಳ 8, 10, 25 ಮತ್ತು 30ನೇ ದಿನಗಳೂ ಟಿಬೇಟಿಯನ್ನರಿಗೆ ಶುಭ ದಿನಗಳಾಗಿವೆ. ಪ್ರತಿ ತಿಂಗಳ ಪೂರ್ಣಿಮೆಯ ದಿನ ಹೊಸ ಚಂದ್ರ ಉದಯವಾಗಿರುವ ದಿನಗಳು ಪ್ರಶಸ್ತ ದಿನಗಳಾಗಿವೆ. ಬೌದ್ಧ ವಿಹಾರಗಳಿಗೆ ಭೇಟಿ ನೀಡುವ ಭಕ್ತದಿಗಳು ತಮ್ಮ ಪೂಜೆಯನ್ನು ಸಲ್ಲಿಸಿದ ನಂತರ ಬುದ್ಧ ಪ್ರತಿಮೆಗಳಿಗೆ ನಮಸ್ಕರಿಸಿ ಸ್ವಲ್ಪ ಹೊತ್ತು ಕುಳಿತು ಲಾಮಗಳ ಜೊತೆ ಬುದ್ಧನ ಪ್ರಾರ್ಥನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ವಲ್ಪ ಸಮಯದ ಆನಂತರ ಹಿಂದಿರುಗುತ್ತಾರೆ. ಹಿಂದಿರುಗುವಾಗ ಬೌದ್ಧವಿಹಾರದ ದ್ವಾರದಲ್ಲಿರುವ ಪ್ರಾರ್ಥನಾ ಚಕ್ರಗಳನ್ನು ತಿರುಗಿಸುತ್ತಾರೆ. ಕಾರಣ ಪ್ರಾರ್ಥನೆಯ ಜೊತೆಗೆ ಇನ್ನು ಹೆಚ್ಚಿನ ಸೇವೆಯನ್ನು ಬುದ್ಧನಿಗೆ ಭಕ್ತಿ ಪೂರ್ವಕವಾಗಿ ಸಲ್ಲಿಸಿ ಬುದ್ಧನ ಕೃಪೆಗೆ ಹಾಗೂ ಆಶೀರ್ವಾದಕ್ಕೆ ಭಾಜನರಾಗುತ್ತೇವೆ ಎಂಬ ನಂಬಿಕೆಯಿದೆ. ಈ ಪ್ರಾರ್ಥನಾ ಚಕ್ರಗಳ ಮೇಲೆ ಆಧ್ಯಾತ್ಮಿಕ ಶಕ್ತಿಯನ್ನೊಳಗೊಂಡಂತಹ 'ಓಂ' ಶಬ್ದಗಳನ್ನು ಕೆತ್ತಲಾಗುತ್ತದೆ. ಈ ರೀತಿ ಪ್ರತಿಯೊಂದು ಹಬ್ಬಗಳಲ್ಲಿಯೂ ವಿಶೇಷತೆಗಳನ್ನು ನೋಡಬಹುದು. ಹಬ್ಬಗಳ ಹಿಂದಿನ ದಿನವೇ ಮನೆಗಳಿಗೆ ಬಣ್ಣಗಳಿಂದ ಅಲಂಕರಿಸುತ್ತಾರೆ. ಪಾತ್ರೆ, ಬಟ್ಟೆ, ಪೀಠೋಪಕರಣಗಳನ್ನು ಸ್ವಚ್ಚಗೊಳಿಸುತ್ತಾರೆ. ಟಿಬೇಟಿಯನ್ನರ ಹಬ್ಬಗಳನ್ನು ಮುಂದಿನಂತೆ ನೋಡಬಹುದಾಗಿದೆ.

## ಲೋಸರ್ ಹಬ್ಬ :

ಜನವರಿ ಒಂದನೇ ತಾರೀಕಿನಂದು, ಭಾರತದಲ್ಲಿ ಯುಗಾದಿ ಹಬ್ಬದ ದಿನವನ್ನು ಹಾಗೆಯೇ ಹಲವಾರು ದೇಶಗಳಲ್ಲಿ ಜನವರಿ ಒಂದನೇ ತಾರೀಖನ್ನು ಹೊಸವರ್ಷದ ಆರಂಭದ ದಿನವನ್ನಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದೇ ರೀತಿಯಲ್ಲಿ ಟಿಬೇಟಿಯನ್ನರು ಸಹ ಲೋಸರ್ ಹಬ್ಬವನ್ನು ಆಚರಿಸುತ್ತಾರೆ. ಹೊಸ ವರ್ಷದ ಹಬ್ಬವನ್ನಾಗಿ ಲೋಸರ್ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಟಿಬೇಟಿಯನ್ ಮಹಿಳೆಯರ ಭಾಗವಹಿಸುವಿಕೆಯು ವಿಶೇಷವಾಗಿರುತ್ತದೆ. ಟಿಬೇಟಿಯನ್ ಮಹಿಳೆಯರು ಈ ಹಬ್ಬದಲ್ಲಿ ಪೂಜೆಯಲ್ಲಿ ಭಾಗವಹಿಸುತ್ತಾರೆ. ಹಾಗೆಯೇ ನೃತ್ಯ, ಸಂಗೀತ, ಆಟಗಳು ಮುಂತಾದವುಗಳಲ್ಲಿ ಭಾಗವಹಿಸುವ ಮೂಲಕ ಮನರಂಜನೆಯನ್ನು ಪಡೆದುಕೊಳ್ಳುತ್ತಾರೆ. ಈ ಹಬ್ಬವು ವರ್ಷದ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ನಡೆಯುತ್ತದೆ. ಈ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸಲಾಗುತ್ತದೆ.

## ಮೊದಲನೆ ದಿನ :

ಲೋಸರ್ ಹಬ್ಬದ ಮೊದಲನೇ ದಿನವನ್ನು "ಲಾಮ ಲೋಸರ್" ಹಬ್ಬವೆಂದು ಕರೆಯುತ್ತಾರೆ. ಲೋಸರ್ ಹಬ್ಬದ ಪ್ರಾರಂಭದ ದಿನ ಟಿಬೇಟಿಯನ್ ಮಹಿಳೆಯರು ಮುಂಜಾನೆಯೇ ಎದ್ದು ಸ್ನಾನ ಮುಗಿಸಿ ಮಡಿಬಟ್ಟೆಯನ್ನು ಧರಿಸುತ್ತಾರೆ. ಮಹಿಳೆಯರು ತಮ್ಮ ಸಂಪ್ರದಾಯದಂತೆ 'ಛುಪ' ಎಂಬ ಉಡುಪನ್ನು ಧರಿಸುತ್ತಾರೆ. ಹಾಗೆಯೇ ಅದರ ಮೇಲೆ 'ಫಗ್ಡೆ' ಎಂಬಂತಹ ವಸ್ತ್ರವನ್ನು ಧರಿಸುತ್ತಾರೆ. ಹಿರಿಯ ಲಾಮಗಳು ಭಗವಾನ್ ಬುದ್ಧ, ಗುರು ಪದ್ಮ ಸಂಭವ, ಶಾಕ್ಯ ಮುನಿ ಬುದ್ಧನನ್ನು ಪೂಜಿಸುತ್ತಾರೆ. ಈ ಸಮಯದಲ್ಲಿ ತುಪ್ಪದ ದೀಪವನ್ನು ಹಚ್ಚುತ್ತಾರೆ. ಗೋಧಿ ಪುಡಿಯಲ್ಲಿ ತುಪ್ಪ ಬೆರೆಸಿ ಬಟ್ಟಲಿನಲ್ಲಿಟ್ಟು ಗೋಧಿ ಮತ್ತು ಮೈದಾದಿಂದ ಮಾಡಿದಂತಹ ತಿನಿಸು, ಹಣ್ಣು-ಹಂಪಲು, ನೀರು ಹಾಗೂ ಇನ್ನಿತರ ಪಾನಿಯಗಳನ್ನು ನೈವೇದ್ಯವಾಗಿ ಬುದ್ಧದೇವನ ಮುಂದೆ ಇಡುವುದರ ಮೂಲಕ ಗಂಧದ ಕಡ್ಡಿಯಿಂದ ಪೂಜೆ ಮಾಡುತ್ತಾರೆ.

ಈ ದಿನದಂದು ರಾಗಿಯಿಂದ ತಯಾರಿಸಿದಂತಹ "ಛಾಂಗ್" ಎಂಬ ಪಾನೀಯವನ್ನು ಕುಡಿಯುತ್ತಾರೆ. ಹಾಗೂ ದರ್ಶನಕ್ಕೆ ಹೋದವರಿಗೂ ಛಾಂಗ್‌ನ್ನು ಪ್ರಸಾದವನ್ನಾಗಿ ನೀಡುತ್ತಾರೆ. ಆನಂತರ ಅವರವರ ವರ್ಗಕ್ಕೆ ಸೇರಿದ ಬೌದ್ಧ ಸ್ತೂಪಗಳಿಗೆ ಹೋಗಿ ಬುದ್ಧನನ್ನು ಆರಾಧಿಸಿ ಬೌದ್ಧಭಿಕ್ಷುಗಳಿಂದ ಆಶೀರ್ವಾದವನ್ನು ಪಡೆಯುತ್ತಾರೆ. ಪೂಜೆಯಿಂದ ಹಿಂದಿರುಗಿ ಆನಂತರ ಮನೆಯಲ್ಲಿ ತಯಾರಿಸಿದ ವಿವಿಧ ರೀತಿಯ ತಿನಿಸುಗಳನ್ನು ತಿಂದು ಆನಂದಿಸುತ್ತಾರೆ.

### ಎರಡನೇ ದಿನ :

ಲೋಸರ್ ಹಬ್ಬದ ಎರಡನೇ ದಿನವನ್ನು 'ಕಿಂಗ್‌ಲೋಸರ್' ಹಬ್ಬವೆಂದು ಕರೆಯುತ್ತಾರೆ. ಪ್ರತಿಯೊಬ್ಬ ಮಹಿಳೆಯರು ತಮ್ಮ ಮನೆಯಲ್ಲಿಯೇ ಪೂಜೆ ಪ್ರಾರ್ಥನೆಯಲ್ಲಿ ತೊಡಗುತ್ತಾರೆನಂತರ ಬೌದ್ಧ ವಿಹಾರಕ್ಕೆ ಹೋಗಿ ಹಿರಿಯ ಲಾಮಗಳ ಜೊತೆ ಬುದ್ಧನ ಪ್ರತಿಮೆಯ ಸನ್ನಿಧಿಯಲ್ಲಿ ಪಾಲ್ಗೊಂಡು ಪೂಜೆ ಪ್ರಾರ್ಥನೆ ಸಲ್ಲಿಸುತ್ತಾರೆ. ಸ್ನೇಹಿತರು ಹಾಗೂ ಬಳಗದವರೊಂದಿಗೆ ಸಿಹಿತಿಂಡಿ ಹಾಗೂ ಮಾಂಸದಿಂದ ತಯಾರಿಸಿದ ಆಹಾರವನ್ನು ಸೇವಿಸುತ್ತಾರೆ. ಈ ದಿನದಂದು ಬೈಲಕುಪ್ಪೆ ಟಿಬೇಟಿಯನ್ ಮಹಿಳೆಯರು ನೃತ್ಯ, ಸಂಗೀತ, ಮುಂತಾದ ಮನರಂಜನೆಗಳಲ್ಲಿ ಮತ್ತು ಕೆಲವು ವಿಶೇಷ ಆಟಗಳಲ್ಲಿ ಭಾಗವಹಿಸುತ್ತಾರೆ. ಈ ದಿನದ ಪೂಜೆಯಲ್ಲಿ ಟಿಬೇಟಿಯನ್ ಮಹಿಳೆಯರು ಯಾವುದೇ ರೀತಿಯ ರೋಗ ರುಜಿನೆಗಳು, ತೊಂದರೆಗಳು ಬಾರದಿರಲಿ ಎಂದು ಪ್ರಾರ್ಥಿಸುತ್ತಾರೆ.

### ಮೂರನೇ ದಿನ

ಲೋಸರ್ ಹಬ್ಬದ ಮೂರನೇ ದಿನವನ್ನು 'ಜನರ ಲೋಸರ್' ಎಂಬುದಾಗಿ ಆಚರಿಸಲಾಗುತ್ತದೆ. ಇದನ್ನು 'ಮೊನ್ ಲಾಮ್' ಹಬ್ಬವೆಂದು ಕರೆಯಲಾಗುತ್ತದೆ. ಈ ಹಬ್ಬಕ್ಕೆ 'ಪ್ರಾರ್ಥನಾ ಹಬ್ಬ' ಎಂಬ ಇನ್ನೊಂದು ಹೆಸರಿನಿಂದ ಕರೆಯಲಾಗುತ್ತದೆ. ಗೆಲುಕ್ವಾ ಸಂಪ್ರದಾಯವನ್ನು ಜಾರಿಗೆ ತಂದ 'ಪ್ಲಾಂಗ್ ಕಪ' ರವರು ಈ ಹಬ್ಬವನ್ನು ಆಚರಣೆಗೆ ತಂದರು. ಈ ಹಬ್ಬದ ದಿನ ಎಲ್ಲಾ ವಿಹಾರಗಳಲ್ಲಿರುವ ಬೌದ್ಧಭಿಕ್ಷುಗಳು ದಲೈಲಾಮಾ, ಹಿರಿಯ ಧರ್ಮಗುರುಗಳು ಟಬೇಟಿಯನ್ನರ ಆಯಾಯ ವಿಹಾರದಲ್ಲಿ ಸೇರಿ ಪ್ರಾರ್ಥನೆ, ಪೂಜೆ, ಸಲ್ಲಿಸುತ್ತಾರೆ. ಅಂದು ಪ್ರತಿಯೊಬ್ಬರೂ ತಮ್ಮಲ್ಲಿರುವ ಪಾಪಕೃತ್ಯ, ಕ್ರೌರ್ಯ, ದುಷ್ಟತನ ಹೋಗಲಾಡಿಸಲು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ತಪ್ಪು ಮಾಡಿದವರಿಗೆ ಧರ್ಮಗುರುಗಳು ಛಡಿಏಟು ಕೊಡುವುದರ ಮೂಲಕ ಶಿಕ್ಷೆಯನ್ನು ವಿಧಿಸುವುದು ಅಂದಿನ ವಿಶೇಷ.

ಆನಂತರ ಹತ್ತು ದಿನಗಳವರೆಗೆ ಸಂಪೂರ್ಣವಾಗಿ ಧಾರ್ಮಿಕ ಕಾರ್ಯಗಳಲ್ಲಿ ಟಿಬೇಟಿಯನ್‌ರು ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಈ ಹತ್ತುದಿನಗಳಲ್ಲಿ ಬೌದ್ಧವಿಹಾರಗಳಲ್ಲಿ ದಿನಕ್ಕೆ ಮೂರು ಬಾರಿ ಪೂಜೆ, ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ವರ್ಷದ ಮೊದಲ ತಿಂಗಳ 15ನೇ ದಿನವನ್ನು 'ದೀಪಗಳ ಹಬ್ಬ' ವೆಂದು ಆಚರಿಸಲಾಗುತ್ತದೆ. ಈ ದಿನ ಎಲ್ಲರ ಮನೆಗಳಲ್ಲಿ, ಆಶ್ರಮಗಳಲ್ಲಿ ತುಪ್ಪದ ದೀಪಗಳನ್ನು ಹಚ್ಚಲಾಗುತ್ತದೆ.

ಪ್ರತಿಯೊಬ್ಬರೂ ವಿಹಾರಗಳಿಗೆ ಹೋಗಿ ವಿಶೇಷ ಪೂಜೆ ಮತ್ತು ಪ್ರಾರ್ಥನೆಗಳಲ್ಲಿ ಪಾಲ್ಗೊಂಡು ಬುದ್ಧನಿಗೆ ತಮ್ಮ ಶಕ್ತಾನುಸಾರ ನಾನಾ ವಸ್ತುಗಳನ್ನು ಅರ್ಪಿಸುತ್ತಾರೆ. ಈ ಸಂದರ್ಭದಲ್ಲಿ ವಿಹಾರದಲ್ಲಿನ ಲಾಮಗಳು ತೆಳುವಾದ ಮರದ ಪಟ್ಟಿಗಳು, ಕಡ್ಡಿಗಳು ಥರ್ಮ, ಬೆಣ್ಣೆ ಬಳಸಿಕೊಂಡು 8 ರಿಂದ 10 ಅಡಿ

ಎತ್ತರದ 'ತೋರ್ಮ' ಪ್ರತಿಮೆಯನ್ನು ಮಾಡುತ್ತಾರೆ. ಇದಕ್ಕೆ ಪೂಜೆಯನ್ನು ಸಲ್ಲಿಸಿದ ನಂತರ ಅಲ್ಲಿನ ವಿಹಾರದ ಸುತ್ತ ಪ್ರದರ್ಶನ ಮಾಡಲಾಗುತ್ತದೆ. ಆನಂತರ ಜನಸಾಮಾನ್ಯರ ದರ್ಶನಕ್ಕೆ ಇಡಲಾಗುತ್ತದೆ. ಈ ದಿನದಂದು ಬೈಲಕುಪ್ಪೆ ಟಿಬೇಟಿಯನ್‌ರು ವಿಶೇಷವಾಗಿ ಪಾಲ್ಗೊಳ್ಳುತ್ತಾರೆ.

20ನೇ ದಿನದಂದು ಕ್ರೀಡಾ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಟಿಬೇಟಿಯನ್ ಮಹಿಳೆಯರು, ಪುರುಷರು, ಬಾಲಕ ಬಾಲಕಿಯರಿಗೆ ಪ್ರತ್ಯೇಕವಾಗಿ ಆಟೋಟಗಳನ್ನು ಏರ್ಪಡಿಸುತ್ತಾರೆ. ಈ ದಿನದಂದು ಬೌದ್ಧವಿಹಾರದ ದ್ವಾರಗಳು ಮತ್ತು ಪ್ರತಿಯೊಂದು ಕ್ಯಾಂಪ್‌ಗಳ ಹೆಬ್ಬಾಗಿಲುಗಳಲ್ಲಿ ಅಲಂಕೃತವಾದ ತೋರಣವನ್ನು ಕಟ್ಟಲಾಗುತ್ತದೆ. ಈ ತೋರಣಗಳಲ್ಲಿ ಶುಭಕಾರಕ ಚಿಹ್ನೆಗಳನ್ನು ನೇತು ಹಾಕುವುದರ ಮೂಲಕ ಕ್ರೂರ ಶಕ್ತಿಗಳಿಂದ ವಿಹಾರಕ್ಕೆ ಮತ್ತು ಊರುಗಳಿಗೆ ಸಂಭವಿಸಬಹುದಾದ ಅನಿಷ್ಟಗಳನ್ನು ತಡೆಯುತ್ತದೆ ಎಂಬ ನಂಬಿಕೆಯಿದೆ. ಈ ಸಂದರ್ಭದಲ್ಲಿ ವರ್ಷದ ಕಾರ್ಯಕ್ರಮಗಳ ಪಟ್ಟಿಯನ್ನು ಟಿಬೇಟಿಯನ್ ವಿದ್ವಾಂಸರಿಂದ ಸಿದ್ದಪಡಿಸಲಾಗುತ್ತದೆ.

ಈ ಲೋಸರ್ ಹಬ್ಬದಲ್ಲಿ 'ಗುಥುಕ್' ಎಂಬಂತಹ ವಿಶೇಷ ಐದು ತಿನಿಸುಗಳನ್ನು ಹೆಚ್ಚಾಗಿ ತಿನ್ನುತ್ತಾರೆ. ಈ ಲೋಸರ್ ಹಬ್ಬದಂದು ಬೈಲಕುಪ್ಪೆಯಲ್ಲಿ ಮುಂಜಾನೆ ಏಳು ಗಂಟೆಯ ಸಮಯಕ್ಕೆ ಟಿಬೇಟಿಯನ್ನರ ಸಂಸ್ಕೃತಿಯನ್ನು ಬಿಂಬಿಸುವ 'ತೇಲಾ ನಮ್‌ಸಮ್' ಪರದೆಯನ್ನು ಅನಾವರಣಗೊಳಿಸಲಾಗುತ್ತದೆ. ಇದು ಭಾರತದಲ್ಲೇ ಏಕೈಕ ಪರದೆಯಾಗಿರುವುದು ವಿಶೇಷವಾಗಿದೆ. ಸಾವಿರಾರು ಟಿಬೇಟಿಯನ್ನರು ಮತ್ತು ಟಿಬೇಟಿಯನ್ ಮಹಿಳೆಯರು ಶ್ರದ್ಧೆ ಭಕ್ತಿಯಿಂದ ಬಂದು ಕಣ್ತುಂಬಿಕೊಳ್ಳುತ್ತಾರೆ. ಪರದೆಯನ್ನು ವರ್ಷಕ್ಕೆ ಒಂದು ಬಾರಿ ಮಾತ್ರ ಅನಾವರಣ ಮಾಡಲಾಗುವುದು.

ಈ ಸಂದರ್ಭದಲ್ಲಿ ಹಲವಾರು ಬೌದ್ಧ ಲಾಮಗಳು ವಿವಿಧ ಬಗೆಯ ಗೊಂಬೆಗಳ ಮುಖವಾಡಗಳನ್ನು ಧರಿಸಿ ಸಭಾಂಗಣದಲ್ಲಿ ನೆರೆದಿದ್ದ ಸಾವಿರಾರು ಟಿಬೇಟಿಯನ್ ನಿರಾಶ್ರಿತರ ಎದುರು ನೃತ್ಯವನ್ನು ಪ್ರದರ್ಶಿಸುತ್ತಾರೆ. ಕೆಲವು ಟಿಬೇಟಿಯನ್ನರು ಪುರುಷರು ಹಾಗೂ ಮಹಿಳೆಯರು ಗೀತೆಗಳಿಗೆ ಡೋಲು, ಕುಣಿತಗಳನ್ನು ನಡೆಸಿಕೊಡುತ್ತಾರೆ. ಕೊನೆಗೆ ಪಟಾಕಿಗಳನ್ನು ಹಚ್ಚಿ ಸಂಭ್ರಮಿಸುತ್ತಾರೆ. ಈ ರೀತಿಯಾಗಿ ಲೋಸರ್ ಹಬ್ಬದ ವಿಶೇಷತೆಗಳನ್ನು ನೋಡಬಹುದಾಗಿದೆ.

## ತ್ಯಾಂಗ್ ಚ್ಯೂ :

ತ್ಯಾಂಗ್ ಚ್ಯೂ ಎಂದರೆ ಲಾಮಗಳ ಹಬ್ಬವೆಂದು ಕರೆಯುತ್ತಾರೆ. ಈ ಹಬ್ಬವು ಟಿಬೇಟಿಯನ್ ಕ್ಯಾಲೆಂಡರ್‌ನ ಪ್ರಕಾರ ವರ್ಷದ ಎರಡನೇ ತಿಂಗಳ 21ನೇ ದಿನದಿಂದ ಆ ತಿಂಗಳ ಕೊನೆಯವರೆಗೆ

ನಡೆಯುತ್ತದೆ. ಈ ಹಬ್ಬದಲ್ಲಿ ಎಲ್ಲಾ ವಿಹಾರದ ಧರ್ಮ ಗುರುಗಳು ಮತ್ತು ಎಲ್ಲಾ ಲಾಮಗಳು, ಬೌದ್ಧಭಿಕ್ಷುಣಿಗಳು ಒಂದೆಡೆ ಸೇರಿ ಬುದ್ಧನಿಗೆ ಪೂಜೆಯನ್ನು ಸಲ್ಲಿಸುವ ಮೂಲಕ ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಈ ಹಬ್ಬದಲ್ಲಿ ಸಾಮಾನ್ಯ ಮನುಷ್ಯನಿಗೆ ಕುರಿಯ ವೇಷವನ್ನು ಹಾಕಿ ನೃತ್ಯ ಮಾಡಿಸಲಾಗುತ್ತದೆ. ಬೌದ್ಧವಿಹಾರದ ಧರ್ಮಗುರುವು ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಕುರಿ ವೇಷವನ್ನು ಧರಿಸಿ ಕುಣಿಯುತ್ತಿರುವವನನ್ನು ಊರಿನಿಂದ ಹೊರಕ್ಕೆ ಓಡಿಸಲಾಗುತ್ತದೆ. ಇದರಿಂದ ದೆವ್ವಗಳನ್ನು ಹೊರಕ್ಕೆ ಅಂಟಿದಂತಾಗುತ್ತದೆ ಎಂಬ ನಂಬಿಕೆಯಿದೆ.

ಇದರ ನಂತರ ಕುರಿಯ ಪ್ರತಿಮೆಗಳನ್ನು ಹುಲುಕಡ್ಡಿ, ಬಟ್ಟೆಯಿಂದ ಮಾಡಿದ ಪ್ರತಿಮೆಯನ್ನು ಸುಡಲಾಗುತ್ತದೆ. ಆದರೆ ಈ ಹಬ್ಬದಲ್ಲಿ ಬೌದ್ಧವಿಹಾರ ಹಾಗೂ ತಮ್ಮ ಊರನ್ನು ಭೂತ, ಪೀಡೆ, ಪಿಶಾಚಿಗಳಿಂದ ರಕ್ಷಿಸಲು ಮತ್ತು ಅವುಗಳಿಂದ ಉಂಟಾಗಬಹುದಾದ ಕೆಡುಕುಗಳನ್ನು ತಡೆಗಟ್ಟಲು ಈ ಹಬ್ಬವನ್ನು ಆಚರಿಸಲಾಗುತ್ತದೆ. ಹಾಗೂ ಈ ಹಬ್ಬದ ಕೊನೆಯ ದಿನದಂದು ಲಾಮಗಳು ಹಲವಾರು ರೀತಿಯ ವಿಭಿನ್ನ ವಿನ್ಯಾಸಗಳ ಭೂತ ಪ್ರೇತಗಳನ್ನು ಹೋಲುವ ಮುಖವಾಡ ಮತ್ತು ಬಟ್ಟೆಗಳನ್ನು ಧರಿಸಿ ಭೂತ ನೃತ್ಯ ಮಾಡುತ್ತಾರೆ. ಇದರಲ್ಲಿ ಬೌದ್ಧಭಿಕ್ಷುಣಿಗಳು ಭಾಗವಹಿಸುತ್ತಾರೆ. ಹಾಗೆಯೇ ಬೈಲಕುಪ್ಪೆ ಟಿಬೇಟಿಯನ್ ಮಹಿಳೆಯರು ಭಕ್ತಿಪೂರ್ವಕವಾಗಿ ಇದರಲ್ಲಿ ಭಾಗವಹಿಸುತ್ತಾರೆ. ಈ ರೀತಿಯ ಒಂದು ಹಬ್ಬವನ್ನು "ತ್ಯಾಂಗ್ ಚೂ" ಹಬ್ಬ ಎಂದು ಕರೆಯುತ್ತಾರೆ.

**ಸಕರ್–ದವ :**

ವರ್ಷದ 4ನೇ ತಿಂಗಳ 15ನೇ ದಿನದಂದು ಸಕರ್–ದವ ಹಬ್ಬವೆಂದು ಆಚರಿಸಲಾಗುತ್ತದೆ. ಈ ಹಬ್ಬವನ್ನು ದಂತಕತೆಯ ಪ್ರಕಾರ ನಡೆಸಿಕೊಂಡು ಬರುತ್ತಿದ್ದಾರೆ. ಬಹುದೊಡ್ಡ ನೀರಿನ ರಾಕ್ಷಸವೊಂದು ಭೂಮಿಯಲ್ಲಿ ವಾಸಿಸುತ್ತಿದ್ದು, ಇದು ವರ್ಷವಡೀ ಬಾಯಿಯನ್ನು ತೆರೆದುಕೊಂಡು ಹಲವಾರು ಪಕ್ಷಿಗಳು ಹಾಗೂ ಸಣ್ಣಪ್ರಾಣಿಗಳಿಗೆ ಆಶ್ರಯ ನೀಡಿರುತ್ತವೆ ಎಂಬ ನಂಬಿಕೆಯಿದೆ.

ಇದು ನಾಲ್ಕನೇ ತಿಂಗಳ 15ನೇ ದಿನದಂದು ತನ್ನ ಬಾಯಿಯನ್ನು ಮುಚ್ಚುವುದರ ಮೂಲಕ ಅಲ್ಲಿ ವಾಸಿಸುತ್ತಿದ್ದ ಎಲ್ಲಾ ಪ್ರಾಣಿ ಪಕ್ಷಿಗಳನ್ನು ನಾಶಮಾಡುತ್ತದೆ. ಈ ಕಾರಣದಿಂದ ಈ ರಾಕ್ಷಸನಿಗೆ ಸಕಲ ಭೋಜನಗಳನ್ನು ನೀಡಿ ತೃಪ್ತಿಪಡಿಸಿ ಶಾಂತಗೊಳಿಸುವ ದಿನವಾಗಿದೆ. ಈ ದಿನದಂದು ಟಿಬೇಟಿಯನ್ ಪುರುಷರು, ಟಿಬೇಟಿಯನ್ ಮಹಿಳೆಯರು ಲಾಮಗಳ ಮುಂದಾಳತ್ವದಲ್ಲಿ ನೀರಿರುವ ಸ್ಥಳಕ್ಕೆ ಹೋಗಿ ಆ ನೀರಿನಲ್ಲಿ ವಾಸಿಸುವ ಸರ್ಪಕ್ಕೆ ಪೂಜೆಯನ್ನು ಸಲ್ಲಿಸಿ ದೇವಾಲಯಗಳಲ್ಲಿ ಪೂಜೆಯನ್ನು ಸಲ್ಲಿಸಿ,

ಬಾರ್ಲಿಯಿಂದ ಮಾಡಿದ ಮುದ್ದೆಗಳು, ಅನ್ನ ನೀಡಿ ಸುಗಂಧದ ಕಡ್ಡಿ, ತುಪ್ಪದ ದೀಪಗಳನ್ನು ಹಚ್ಚಿ ಪೂಜೆ ಸಲ್ಲಿಸುತ್ತಾರೆ.

## ವಸಂತ ಮಾಸದ ಹಬ್ಬ :

ವರ್ಷದ 3ನೇ ತಿಂಗಳ 8ನೇ ದಿನವನ್ನು ವಸಂತ ಮಾಸದ ಪ್ರಾರಂಭದ ದಿನವಾಗಿ ಆಚರಿಸುತ್ತಾರೆ. ಇವರು ಟಿಬೇಟ್‌ನಲ್ಲಿ ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬರುತ್ತಿದ್ದನ್ನು ಈಗಲೂ ಪಾಲಿಸಿಕೊಂಡು ಹೋಗುತ್ತಿದ್ದಾರೆ. ಈ ಹಬ್ಬದ ಸಂದರ್ಭದಲ್ಲಿ ಬೌದ್ಧವಿಹಾರಗಳಲ್ಲಿ ಮತ್ತು ಟಿಬೇಟಿಯನ್ನರ ಮನೆಗಳಲ್ಲಿ ಒಂದೆಡೆ ಸೇರಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ಈ ಹಬ್ಬದಲ್ಲಿಯೂ ಬೈಲಕುಪ್ಪೆ ಟಿಬೇಟಿಯನ್ ಮಹಿಳೆಯರು ವಿಶೇಷವಾಗಿ ಭಾಗವಹಿಸುತ್ತಾರೆ. ಈ ಹಬ್ಬದಲ್ಲಿ – ಸಿಹಿ ತಿನಿಸುಗಳನ್ನು ಮಾಡಿ ಪ್ರಸಾದವಾಗಿ ನೀಡಲಾಗುತ್ತದೆ.

## ದೀಪಗಳ ಹಬ್ಬ :

ವರ್ಷದ 6ನೇ ತಿಂಗಳ 4ನೇ ದಿನವನ್ನು ಸಣ್ಣದೀಪಗಳ ಹಬ್ಬವಾಗಿ ಆಚರಿಸುತ್ತಾರೆ. ಈ ದಿನದಂದು ಹಲವಾರು ರೀತಿಯ ದೆವ್ವದ ನೃತ್ಯಗಳನ್ನು ಮಾಡಿ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಈ ರೀತಿ ಆಚರಿಸುವುದರಿಂದ ದೆವ್ವಗಳು ಬುದ್ಧಿಭ್ರಮಣೆ ಹೊಂದುತ್ತವೆ ಎಂಬ ನಂಬಿಕೆಯಿದೆ. ಬೈಲಕುಪ್ಪೆ ಟಿಬೇಟಿಯನ್ ಮಹಿಳೆಯರು ತುಪ್ಪವನ್ನು ಬಳಸಿ ದೀಪವನ್ನು ಹಚ್ಚುತ್ತಾರೆ. ಹಾಗೆಯೇ ಬೌದ್ಧ ವಿಹಾರಗಳಲ್ಲಿ ಮನೆಗಳಲ್ಲಿ ತುಪ್ಪದ ದೀಪಗಳನ್ನು ಹಚ್ಚುವ ಮೂಲಕ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಪುರುಷರು ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ.

## ಮೂತೋರ್ ತೋರ್ಮ ಹಬ್ಬ :

ಮೂತೋರ್ ತೋರ್ಮ ಹಬ್ಬವನ್ನು ವರ್ಷದ 10ನೇ ತಿಂಗಳ 15ನೇ ದಿನದಂದು ಆಚರಿಸಲಾಗುತ್ತದೆ. ಈ ದಿನದಂದು ಮುಖ್ಯ ಬೌದ್ಧವಿಹಾರದಲ್ಲಿ ಎಲ್ಲಾ ಲಾಮಗಳು ಸೇರಿ ಬಹುದೊಡ್ಡದಾದ ತೋರ್ಮಪ್ರತಿಮೆಯನ್ನು ಮಾಡಲಾಗುತ್ತದೆ. ಇದಾದ ನಂತರ ಬೌದ್ಧವಿಹಾರದಲ್ಲಿ ಪೊಕೆಟಾಂಗ್ಪೊ ದೇವಿಗೆ ಪೂಜೆಯನ್ನು ಸಲ್ಲಿಸಿದ ನಂತರ ಸಾಮಾನ್ಯ ಜನರು ಸೇರಿದಂತೆ ಪ್ರತಿಮೆಯನ್ನು ಮೆರವಣಿಗೆ ಮಾಡಲಾಗುತ್ತದೆ. ತದನಂತರ ದೇವಿಯ ಮಹಿಮೆಯಿಂದ ತೊರ್ಮ ಪ್ರತಿಮೆಯನ್ನು ಸಣ್ಣ ಸಣ್ಣ ಚೂರುಗಳಾಗಿ ಮಾಡಿ ಅವುಗಳನ್ನು ಟಿಬೇಟಿಯನ್ನರು ಹಾಗೂ ಲಾಮಗಳ ಕಡೆಗೆ ಎಸೆಯಲಾಗುತ್ತದೆ. ಈ ರೀತಿ ಸಿಕ್ಕಂತಹ ತೊರ್ಮ ಚೂರುಗಳನ್ನು ತಾಯಿತಗಳೆಂದು ಭಾವಿಸಿ ಬಳಸುತ್ತಾರೆ. ಅಂದರೆ ಈ

ಚೂರಿನಲ್ಲಿ ದೈವ ಶಕ್ತಿಯಿದ್ದು ಇದನ್ನು ಧರಿಸುವವರಿಗೆ ಯಾವುದೇ ರೀತಿಯ ಕೆಡಕುಗಳು ಉಂಟಾಗುವುದಿಲ್ಲ ಎಂಬ ನಂಬಿಕೆಯಿದೆ.

## ವಕ್ತೃಗಳ ಪರಿಚಯ :

| ಕ್ರಮ ಸಂಖ್ಯೆ | ವಕ್ತೃಗಳು | ವಯಸ್ಸು | ಸಮುದಾಯ |
|---|---|---|---|
| 1. | ಸಿರಿಪುಟ್ಟಿ | 73 | ಟಿಬೇಟಿಯನ್ |
| 2 | ಟೆಂಜಿನ್ ದೋಲ್ವ | 49 | ಟಿಬೇಟಿಯನ್ |
| 3 | ಕುಝುಂಗ್ | 43 | ಟಿಬೇಟಿಯನ್ |
| 4 | ಅರುಣ್ ಕುಮಾರ್ | 35 | ಸ್ಥಳೀಯರು |
| 5 | ಸಿರಿದಾಲ್ | 29 | ಟಿಬೇಟಿಯನ್ |
| 6 | ಶ್ರೀನಿವಾಸ | 34 | ಸ್ಥಳೀಯರು |
| 7 | ದರ್ಶನ್ ಕುಮಾರ್ | 40 | ಸ್ಥಳೀಯರು |
| 8 | ನಾಗರಾಜು | 35 | ಸ್ಥಳೀಯರು |

## ಪರಾಮರ್ಶನ ಗ್ರಂಥಗಳು :


1. ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್ – ಡಾ.ಪಿ.ಕೆ.ರಾಜಶೇಖರ್, ಕರ್ನಾಟಕ ಸರ್ಕಾರ, 2010.
2. ವಿಶ್ವಚೇತನ ಬುದ್ಧ ಡಾ. ವಿ. ಮುನಿವೆಂಕಟಪ್ಪ – ಪಂಚಮ ಪ್ರಕಾಶನ, 2012
3. ಸೆರಾಜೆ ಬೌದ್ಧ ವಿಹಾರದ ಸಾಮಾನ್ಯ ಮೋಹಿನಿಯ ಭಂಡಾರ
4. ಅಂತರ್ಜಾಲ ಮಾಹಿತಿ